ದಿನಾಂಕಃ27-04-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಎನ್ ಎನ್ ವಕೀಲರಿಂದಃ**

ನನ್ನ ಹಾಗೂ ವಾದಿಗಳ ಆಸ್ತಿಯ ಮೂಲ ಮಾಲೀಕರು ರಾಂ ರಾವ್ ಎನ್ನುವವರು ಎಂದರೆ ಸರಿ. ಸದರಿ ರಾಂರಾವ್ ರವರಿಗೆ ಚನ್ನಗಿರಿ-ಚಿತ್ರದುರ್ಗ ಮುಖ್ಯ ರಸ್ತೆಯಲ್ಲಿ ಪೂರ್ವ-ಪಶ್ಚಿಮ 37 ಅಡಿ, ಉತ್ತರ-ದಕ್ಷಿಣ 140 ಅಡಿ ಖಾಲಿ ನಿವೇಶನವಿತ್ತು ಎಂದರೆ ಸರಿ. ಸದರಿ ಖಾಲಿ ನಿವೇಶನದಲ್ಲಿ ಪೂರ್ವ-ಪಶ್ಚಿಮ 15 ಅಡಿ, ಉತ್ತರ-ದಕ್ಷಿಣ 30 ಅಡಿ ಜಾಗವನ್ನು ಓಂ ಪ್ರಕಾಶ್ ಎನ್ನುವವರಿಗೆ 1989 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿಯನ್ನು ಓಂ ಪ್ರಕಾಶ್ ರವರಿಂದ ನಾವು ಖರೀದಿಸಿರುತ್ತೇವೆ ಎಂದರೆ ಸರಿ. ನಾವು ಖರೀದಿಸಿದ ಆಸ್ತಿ ಪೂರ್ವ- ಪಶ್ಚಿಮ 15 ಅಡಿ, ಉತ್ತರ-ದಕ್ಷಿಣ 30 ಅಡಿ ಎಂದರೆ ಸರಿ. ಸದರಿ ರಾಂ ರಾವ್ ರವರು ಓಂಪ್ರಕಾಶ್ ರವರಿಗೆ ಮಾರಾಟ ಮಾಡಿದ ಸ್ವತ್ತಿನ ಚೆಕ್ಕುಬಂದಿ ಪೂರ್ವಕ್ಕೆ ಮಹಾಲಿಂಗಪ್ಪ ಮತ್ತು ರಾಜಪ್ಪನವರ ಖಾಲಿ ನಿವೇಶನ. ಪಶ್ಚಿಮಕ್ಕೆ ರಾಂ ರಾವ್ ರವರ ಉಳಿದ ಸ್ವತ್ತು ಎಂದರೆ ಸರಿಯಲ್ಲ. ಉತ್ತರಕ್ಕೆ ರಾಂ ರಾವ್ ರವರ ಉಳಿದ ಸ್ವತ್ತು ಎಂದರೆ ಸರಿ. ದಕ್ಷಿಣಕ್ಕೆ ಮುಖ್ಯ ರಸ್ತೆ ಎಂದರೆ ಸರಿ. ಸದರಿ ಓಂ ಪ್ರಕಾಶ್ ರವರು ರಾಂ ರಾವ್ ರವರಿಂದ ಖರೀದಿಸಿದ ಆಸ್ತಿಯ ಕ್ರಯಪತ್ರವನ್ನು ನಾನು ನೋಡಿರುವ ಬಗ್ಗೆ ನನಗೆ ನೆನಪಿಲ್ಲ, ಸದರಿ ಕ್ರಯಪತ್ರದಲ್ಲಿ ಉಲ್ಲೇಖವಾದ ಚೆಕ್ಕುಬಂದಿ ನನಗೆ ನೆನಪಿಲ್ಲ, ಸದರಿ ಪತ್ರದಲ್ಲಿ ನಮೂದಿಸಿರುವಂತೆ ಪಶ್ಚಿಮ ಭಾಗದ ಚೆಕ್ಕುಬಂದಿ 7 ಅಡಿ ಓಣಿ ಬರುತ್ತದೆ. ಸದರಿ 7 ಅಡಿ ಓಣಿ ಎಂದು ಕ್ರಯ ಪತ್ರದಲ್ಲಿ ನಮೂದು ಇರುವ ಕುರಿತು ನಾನು ನೋಡಿರುತ್ತೇನೆ. ಸದರಿ ಕ್ರಯಪತ್ರ ನನ್ನ ಬಳಿ ಇದೆ ಎಂದರೆ ಸರಿ. ಸದರಿ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೇನು ತೊಂದರೆಯಿಲ್ಲ ಎಂದರೆ ಸರಿ. ಸದರಿ ಕ್ರಯಪತ್ರದ ಪಶ್ಚಿಮದ ಚೆಕ್ಕುಬಂದಿ ರಾಂ ರಾವ್ ರವರ ಉಳಿಕೆ ಸ್ವತ್ತು ಎಂದು ನಮೂದು ಇದ್ದು , ನಾನು ಹೇಳಿದಂತೆ 7 ಅಡಿ ಓಣಿ ಎಂದು ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ.

ದಿಃ 02-08-1989 ರಲ್ಲಿ ಓಂ ಪ್ರಕಾಶ್ ರವರು ನನಗೆ ಸದರಿ ಆಸ್ತಿಯ ಕ್ರಯಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಕ್ರಯಪತ್ರದಲ್ಲಿ ಪಶ್ಚಿಮದ ಚೆಕ್ಕುಬಂದಿ 7 ಅಡಿ ಜಾಗ ಎಂದು ಸೇರಿಸಿಕೊಂಡು ಕ್ರಯಪತ್ರ ಬರೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವಾಸ್ತವವಾಗಿ ನಾನು ಖರೀದಿಸಿದ ಅಸ್ತಿಯ ಪಶ್ಚಿಮ ದಿಕ್ಕಿನಲ್ಲಿ ಯಾವುದೇ ಓಣಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಓ ಪ್ರಕಾಶ್ ರವರಿಂದ ಖರೀದಿಸಿದ 15 ಇಂಟು 30 ಅಡಿ ಖಾಲಿ ನಿವೇಶನ ಮಾಲೀಕ ಎಂದರೆ ಸರಿ. ನಾನು ಖರೀದಿಸಿದ ನಂತರ ಸದರಿ ಜಾಗದಲ್ಲಿ ಕಟ್ಟಡವನ್ನು ನಿರ್ಮಿಸಿರುತ್ತೇನೆ ಎಂದರೆ ಸರಿ. ಸದರಿ 15 ಇಂಟು 30 ಅಡಿಯ ಒಟ್ಟು ವಿಸ್ತೀರ್ಣದಲ್ಲಿ ನಾನು ಕಟ್ಟಡವನ್ನು ಕಟ್ಟಿರುತ್ತೇನೆ ಎಂದರೆ ಸರಿ. ಸದರಿ ನಿವೇಶನದಲ್ಲಿ ಯಾವುದೇ ಗಾಳಿ ಬೆಳಕು ಮತ್ತು ಇತರೆ ಉಪಯೋಗಗಳಿಗಾಗಿ ಯಾವುದೇ ಖಾಲಿ ಜಾಗವನ್ನು ಬಿಟ್ಟಿವುದಿಲ್ಲ ಎಂದರೆ ಸರಿ.

ವಾದಿ ಹಾಕಿರುವ ಈ ದಾವೆಯ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ ಮತ್ತು ಸದರಿ ದಾವೆಗೂ ತಕರಾರನ್ನು ಸಲ್ಲಿಸಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ವಾದಿಗಳು ದಾವಾಸ್ತಿಯನ್ನು 2005 ರಲ್ಲಿ ನಿಪಿ-1 ರಂತೆ ದಿನೇಶ್ ಕುಮಾರ್ ಎನ್ನುವವರಿಂದ ಖರೀದಿಸಿದ್ದರು ಎಂದರೆ ಸರಿ. ಸದರಿ ದಿನೇಶ್ ಕುಮಾರ್ ಎ ನುನವವರು ನಿಪಿ-1 ರ ಷೆಡ್ಯೂಲ್ ಆಸ್ತಿಯನ್ನು ಅದರ ಮೂಲ ಮಾಲೀಕರಾದ ರಾಂ ರಾವ್ ರವರಿಂದ ಪೂರ್ವ-ಪಶ್ಚಿಮ 22 ಅಡಿ ಅಗಲ, ಉತ್ತರ ದಕ್ಷಿಣ-140 ಅಡಿ ಉದ್ದ ಹಾಗೂ ಖರೀದಿಸಿದ್ದರು ಎಂದರೆ ಸರಿ. ಉತ್ತರ ಭಾಗದಲ್ಲಿ110 ಅಡಿ ಅಗಲ ಇತ್ತು ಎಂದರೆ ಸರಿಯಲ್ಲ. ಸದರಿ ಆಸ್ತಿ ' L ' ಎಲ್ ಆಕಾರದಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ನಾನು ಖರೀದಿಸಿದ ಆಸ್ತಿಯ ಉತ್ತರ ಭಾಗದಲ್ಲಿ ಈಗಲೂ ಸಹ ವಾದಿಯರ ಆಸ್ತಿ ಎಂದರೆ ಸರಿ. ಪಶ್ಚಿಮ ಭಾಗದಲ್ಲೂ ಸಹ ವಾದಿಯವರ ಆಸ್ತಿ ಎಂದರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಪಶ್ಚಿಮ ಭಾಗದಲ್ಲಿ ಓಣಿ ಇದೆ ಎಂದು ನುಡಿಯುತ್ತಾರೆ.

ವಾದಿಯ ಹೆಸರಿನಲ್ಲಿ ದಾವಾ ಎ ಷೆಡ್ಯೂಲ್ ಆಸ್ತಿಯ ವಿಸ್ತೀರ್ಣಕ್ಕೆ ಪಟ್ಟಣ ಪಂಚಾಯತಿ ಚನ್ನಗಿರಿಯಲ್ಲಿ ಖಾತೆ ಇದೆ ಎಂದರೆ ನನಗೆ ಗೊತ್ತಿಲ್ಲ.ಸದರಿ ಅಸ್ತಿಯ ವಿಸ್ತೀರ್ಣಕ್ಕೆ ವಾದಿಯರ ಹಿಸ್ಸೆಗೆ ಇ ಸ್ವತ್ತು ಆಗಿದೆ ಎಂದರೆ ನನಗೆಗೊತ್ತಿಲ್ಲ. ಹಾಗಾಗಿ ನಾನು ವಾದಿಗಳಿಗೆ ಸೇರಿದ ಎ ಷಡ್ಯೊಲ್ ಆಸ್ತಿ ಇಲ್ಲ ಎಂದರೆ ಯಾವುದೇ ದಾಖಲೆಗಳನ್ನು ನೋಡಿಲ್ಲ ಎಂದರೆ ಸರಿ. ಹಾಗಾಗಿ ವಾದಿಗಳ ಆಸ್ತಿಯ ವಿಸ್ತೀರ್ಣದ ಕುರಿತು ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿ. ದಾವಾ ಎ ಷೆಡ್ಯೂಲ್ ಅಸ್ತಿಯನ್ನು ವಾದಿಗಳು 2013 ರಲ್ಲಿ ನಿಪಿ-5 ರಂತೆ ಪಾಲುವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಗಳು ಈ ದಾವೆಯನ್ನು ಸಲ್ಲಿಸಿದ ನಂತರವೂ ಸಹ ವಾದಿಗಳ ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ನೋಡಿಲ್ಲ ಎಂದರೆ ಸರಿ.

ನಾನು ಮತ್ತು ವಾದಿಗಳು ಹಾಲಿ ವಾಸವಿರುವ ಜಾಗ ಮೂಲ ಮಾಲೀಕರಾದ ರಾಂ ರಾವ್ ರವರ ಒಂದೇ ನಿವೇಶನ ಎಂದರೆ ಸರಿಯಲ್ಲ. ಹಾಗಾಗಿ ಸದರಿ ಮೂಲ ಮಾಲೀಕರಿಗೆ ನನ್ನ ಹಾಗೂ ವಾದಿಗಳ ಸ್ವತ್ತ ಹೊರತುಪಡಿಸಿ ಬೇರೆ ಯಾವುದೇ ವಿಸ್ತೀರ್ಣದ ಆಸ್ತಿ ಅಸೆಸ್ ಮೆಂಟ್ ನಂ 822/716 +717+ 718 ಅಕ್ಕಪಕ್ಕ ಇರಲಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ.

ನಾನು ನನ್ನ ಮುಖ್ಯ ವಿಚಾರಣ ಪ್ರಮಾಣಪತ್ರದ ಪ್ಯಾರ ನಂ 3 ರಲ್ಲಿ ಹೇಳಿದಂತೆ ಮೂಲ ಮಾಲೀಕರಾದ ರಾಂ ರಾವ್ ರವರು ತಮ್ಮ ಆಸ್ತಿಯನ್ನು ಪೂರ್ವ-ಪಶ್ಚಿಮವಾಗಿ 8 + 8 ರಂತೆ 16 ಒಟ್ಟು 16 ನಿವೇಶನಗಳಾಗಿ ವಿಂಗಡಿಸಿದ್ದು ಅದರ ಮಧ್ಯೆದಲ್ಲಿ ಓಣಿಯನ್ನು ಬಿಟ್ಟ ಕುರಿತು ದಾಖಲೆಗಳನ್ನು ನೋಡಿದ್ದೀರ ಎಂದರೆ ಸಾಕ್ಷಿ ಕರಪತ್ರ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಇಲಾಖೆಯಿಂದ ಪಡೆದ ಅನುಮತಿ, ನಕ್ಷೆ ಮುಂತಾದ ಅಧಿಕೃತ ದಾಖಲೆಗಳನ್ನು ನೋಡಿದ್ದೀರ ಎಂದರೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೇ. ಹಾಗಾಗಿ ಸದರಿ ಆಸ್ತಿಯ ಮೂಲ ಮಾಲೀಕರಾದ ರಾಂ ರಾವ್ ರವರು ಯಾವುದೇ ವಿಂಗಡನೆ ಮಾಡಿಲ್ಲದೆ ಇದ್ದರು ಸಹ ನಾನು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ

ನಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಸದರಿ ಆಸ್ತಿ ಒಂದೇ ನಿವೇಶನವಾದ ಕಾರಣ ಸದರಿ ಆಸ್ತಿಯಲ್ಲಿ ಆಸ್ತಿಯಲ್ಲಿ 7 ಅಡಿ ಜಾಗವನ್ನು ಓಣಿಗಾಗಿ ಬಿಡುವ ಪ್ರಮೇಯವೇ ಇಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆಗಾಗಿ ಸುಳ್ಳು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

(ವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಾಕಾಶ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.